



ಲೀಮಾ ನಗರದಿಂದ ಕಾಣುವ
ಪೆಸಿಫಿಕ್ ಸಾಗರದ ದೃಶ್ಯ



ಸ್ಪ್ಯಾನಿಷ್ ಬರ್‍ರಾಕ್
ಶೈಲಿಯ ಚರ್ಚ್

ವ್ಯಾಪಾರ ಹೀಗೆ ಹಲವಾರು ಸಂಗತಿಗಳಿಗೆ ಚರಿತ್ರೆಯಲ್ಲಿ ಲೀಮಾ ನಗರ ಸಾಕ್ಷಿಯಾಗಿದೆ. 1988ರಲ್ಲಿ ಯುನೆಸ್ಕೋ ಈ ನಗರವನ್ನು ವಿಶ್ವಪರಂಪರೆಯ ತಾಣವೆಂದು ಘೋಷಿಸಿತು.

## ನಗರದ ಪ್ರಮುಖ ಆಕರ್ಷಣೆಗಳು

**ಪ್ಲಾಜಾ ಡೆ ಅರಮಾಸ್:** ಲೀಮಾದ ಐತಿಹಾಸಿಕ ಕೇಂದ್ರವಾಗಿದ್ದು, ಆಡಳಿತಾತ್ಮಕ ಕಟ್ಟಡಗಳು, ಗವರ್ನಮೆಂಟ್ ಪ್ಯಾಲೆಸ್, ಮ್ಯೂಸಿಯಂ, ಕ್ಯಾಥೆಡ್ರಲ್ ಆಫ್ ಲೀಮಾ ಮತ್ತು ಇತರ ಪ್ರಮುಖ ಕಟ್ಟಡಗಳಿವೆ.

**ಮಿರಾಫ್ಲೋರೆಸ್:** ಪ್ರವಾಸಿಗರಿಗೆ ಜನಪ್ರಿಯ ಪ್ರದೇಶವಿದು. ಸಾಗರ ತೀರದ ದೃಶ್ಯಗಳು, ಉದ್ಯಾನವನಗಳು ಮತ್ತು ರೆಸ್ಟೋರೆಂಟ್‌ಗಳಿಗೆ ಹೆಸರುವಾಸಿ. ಇಲ್ಲಿರುವ ಲವರ್ಸ್ ಪಾರ್ಕ್ ಪ್ರೇಮವನ್ನು ಉತ್ತೇಜಿಸಲೆಂದೇ ರೂಪಿಸಲಾಗಿದೆ.

**ಪಾಚಕಾಮಾಕ್:** ಲೀಮಾದ ಇತಿಹಾಸ ಮತ್ತು ಸಂಸ್ಕೃತಿಯ ಒಂದು ಪ್ರತೀಕವಾಗಿದೆ. ಇಲ್ಲಿ ಪೂರ್ವ ಕೊಲಂಬಿಯನ್ ಯುಗದಿಂದ ಸ್ಪ್ಯಾನಿಷ್ ವಸಾಹತು ಕಾಲದವರೆಗಿನ ಪರಿವರ್ತನೆಯನ್ನು ತಿಳಿಸುವ ಪುರಾತತ್ವ ವಸ್ತುಸಂಗ್ರಹಾಲಯವಿದೆ. ಇಲ್ಲಿ ಲೀಮಾ ಸಂಸ್ಕೃತಿ, ವಾರಿ ಸಂಸ್ಕೃತಿ ಮತ್ತು ನಂತರ ಇಂಕಾ ಸಂಸ್ಕೃತಿಯ ವಿವರಗಳಿವೆ. ಅಲ್ಲದೆ, ಈ ತಾಣವು ದೇವಾಲಯಗಳು, ಪಿರಮಿಡ್‌ಗಳು ಮತ್ತು ಸಮಾಧಿ ಸ್ಥಳಗಳನ್ನು ಒಳಗೊಂಡಿದೆ.

**ಪೆರುವಿಯನ್ ಆಹಾರ:** ಲೀಮಾ, ಪೆರುವಿಯನ್ ಪಾಕಪದ್ಧತಿಯ ಕೇಂದ್ರವಾಗಿದೆ. ಲೀಮಾವನ್ನು 'ದಕ್ಷಿಣ ಅಮೆರಿಕದ ಗ್ಯಾಸ್ಟ್ರೊನಮಿಕ್ ರಾಜಧಾನಿ' ಎಂದು ಕರೆಯಲಾಗುತ್ತದೆ. ಪೆರುವಿಯನ್ ಆಹಾರವು ಸ್ಥಳೀಯ,



ಪೆರುವಿಯನ್ ಸಂಸ್ಕೃತಿಯ ಚಹರೆಯಂತಿರುವ
ಸ್ಥಳೀಯರು